ಸಾಕ್ಷಿಯನ್ನು ದಿ.17.02.2021 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ: ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-

ದಿ: 20.06.2006 ರಂದು ಮತ್ತು ದಿ: 30.09.2009 ರಂದು ಬರೆದುಕೊಂಡ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.28 ಮತ್ತು ನಿಪಿ.29 ಎಂದು, ರಸೀದಿಗಳನ್ನು ನಿಪಿ.30 ರಿಂದ ನಿಪಿ.32 ಎಂದು, ಅಲಾಟ್‌ಮೆಂಟ್ ಲೆಟರ್‌ನ್ನು ನಿಪಿ.33 ಎಂದು ಗುರುತಿಸಲಾಯಿತು.

ಪಾಟೀ ಸವಾಲು:- ಆರೋಪಿ ಪರ ಶ್ರೀ ಬಿಎಸ್ ವಕೀಲರಿಂದ ಃ-

ನಾನು ಎರಡು ಸೈಟ್‌ಗಳನ್ನು ಬುಕ್ ಮಾಡಿದ್ದೆ. ಲೇ ಔಟ್ ಹೆಸರು ಸಂಯುಕ್ತ ಎನ್‌ಕ್ಲೇವ್ ಇದ್ದು, ಸೈಟ್ ನಂ.138 ಮತ್ತು 111 ಇರುತ್ತದೆ. ಲೇ ಔಟ್‌ನ್ನು ನೋಡಿರುತ್ತೇನೆ. ಸಂಯುಕ್ತ ಎನ್‌ಕ್ಲೇವ್‌ಗೆ 3 ಜನ ಪಾಲುದಾರರು ಇದ್ದು ಅವರೆಂದರೆ 1 ರಿಂದ 3ನೇ ಆರೋಪಿಗಳು. ವಕೀಲರ ಮೂಲಕ ಸೈಟ್ ನೊಂದಣಿ ಮಾಡಿಸಿಕೊಡಿ ಎಂದು ಆರೋಪಿಗಳಿಗೆ ನೋಟೀಸ್ ಕೊಡಿಸಿಲ್ಲ. ಸೇಲ್ ಅಗ್ರೀಮೆಂಟ್‌ಗೆ ಸಂಬಂಧಪಟ್ಟಂತೆ ಸಿವಿಲ್ ದಾವೆ ಹಾಕಿಲ್ಲ. ಗ್ರಾಹಕರ ನ್ಯಾಯಾಲಯದಲ್ಲೂ ದೂರು ಕೊಟ್ಟಿಲ್ಲ. ನಿಪಿ.30 ರಿಂದ 32 ರಲ್ಲಿ ನಮುದಿಸಿದ ಹಣವನ್ನು ಸಂಯುಕ್ತ ಎನ್‌ಕ್ಲೇವ್ ಸಂಸ್ಥೆಗೆ ಕೊಟ್ಟಿರುತ್ತೇನೆ. ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಆರೋಪಿಗಳ ತಪ್ಪು ಇಲ್ಲದೇ ಇದ್ದರೂ ಅವರ ಮೇಲೆ ಸುಳ್ಳು ಕೇಸು ಹಾಕಿದ್ದೇನೆಂದರೆ ಸರಿಯಲ್ಲ.

ಮರು-ವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯೊಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಪಿಡಬ್ಲ್ಯೂ: 10**

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ